# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ | ಮಾರ್ಗಶಿರ | ನವಂಬರ್ ೨೦೦೯ | ಸಂಪುಟ-೩ | ಸಂಚಿಕೆ-೧೧


## ಗುರುವಾಣಿ



**ಹೂರಣ**

**ಗುರುವಾಣಿ**
**ಪ್ರಶ್ನೋತ್ತರ**
**ಮಾಸದ ಗೋವು:** ಸಿರಿ
**ಪೂರ್ವಾರ್ಧದ ಯಾತ್ರೆಯ ಸುತ್ತ ಒಂದು ಸುತ್ತು**


ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org, gougram.org
ಸಂಪರ್ಕ: govishva@gmail.com




# ಕರ್ನಾಟಕದಲ್ಲಿ ಯಾತ್ರೆ
# ಗೋಮಾತೆಯ ಪದತಲಗಳಲ್ಲಿ
# ಭಕ್ತಿ, ಭಾವ, ಶ್ರದ್ಧೆಗಳ ಸಮರ್ಪಣೆಗೆ ಸುಸಮಯ

ಯಾತ್ರೆ ಕರ್ನಾಟಕ ಪ್ರವೇಶಿಸುತ್ತಿದೆ.

ಭಾರತದ ಜನ ಮಾನಸವನ್ನು ಗೋವೆಂಬ ಏಕ ಸೂತ್ರದಡಿಯಲ್ಲಿ ಬೆಸೆಯುತ್ತಿರುವ ಯಾತ್ರೆ, ವಿಶ್ವ ಮಂಗಲ ಗೋ ಯಾತ್ರೆ, ನಮ್ಮ ನೆಲ, ಕರ್ನಾಟಕವನ್ನು ಪ್ರವೇಶಿಸುತ್ತಿದೆ.

ಯಾತ್ರೆಗೆ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ ಪುರಸ್ಕಾರ, ಆದರ, ಆತಿಥ್ಯ. ಕೆಲವರದ್ದು ಭಾವ ಪರಾಕಾಷ್ಠೆ, ಮತ್ತೆ ಕೆಲವರದ್ದು ಭಕ್ತಿಯ ಚರಮಸೀಮೆ, ಜನಾಂದೋಲನದ ಮಾದರಿ, ಮತ್ತುಳಿದವರದ್ದು ಸರಾಸರಿ ಪ್ರತಿಸ್ಪಂದನ. ಏನೇ ಭಿನ್ನತೆ ಇದ್ದರೂ ಎಲ್ಲವೂ ಗೋಮಾತೆಯ ಚರಣ ಕಮಲಗಳಿಗೆ ಸಮರ್ಪಿತವಾಗುತ್ತಿದೆ.

ಅಂತಹ ಯಾತ್ರೆ ನಮ್ಮ ಕನ್ನಡ ಜನಮಾನಸವನ್ನು ಒಗ್ಗೂಡಿಸಲಿದೆ.

ಗೋ ಸಂರಕ್ಷಣಾ ವಿಚಾರದಲ್ಲಿ ನಮ್ಮ ಕರ್ನಾಟಕ ಬಹು ಜಾಗೃತ ರಾಜ್ಯ ಎಂದೇ ಹೇಳಬೇಕು. ಜನ ಜಾಗೃತಿ ಆಂದೋಲನಗಳು, ಗೋಯಾತ್ರೆಗಳು, ಗವ್ಯೋತ್ಪನ್ನಗಳ ಉತ್ಪಾದನೆ ಇವಾವುದಕ್ಕೂ ಕೊರತೆ ಇಲ್ಲ. ಆದ್ದರಿಂದ ಈ ಯಾತ್ರೆಯ ಹಂದರದಲ್ಲಿ ಮತ್ತೂ ಹಲವು ಹೆಜ್ಜೆ ಮುಂದೆ ಹೋಗಿ, ಗೋವಿನ, ತನ್ಮೂಲಕ ಸಮಸ್ತರ ಜೀವನವನ್ನು ಸುಂದರಗೊಳಿಸಬೇಕಿದೆ.

ಯಾತ್ರೆ ನವಂಬರ್ 30ರ ಗೋಧೂಳಿ ಮುಹೂರ್ತದಲ್ಲಿ ಮೈಸೂರು ಮಹಾನಗರವನ್ನು ಪ್ರವೇಶಿಸಲಿದೆ. ನಂತರ ಡಿಸೆಂಬರ್ ಮೊದಲ ವಾರದಲ್ಲಿ ಕರ್ನಾಟಕ ಸಂಚಾರ.

ಆ ಸಂದರ್ಭದಲ್ಲಿ ಯಾತ್ರೆಯ ಸ್ಫೂರ್ತಿಗೆ, ನಮ್ಮದೂ ಒಂದಷ್ಟನ್ನು ಸೇರಿಸಿ, ಮತ್ತಷ್ಟು ಉಸ್ಫೂರ್ತಗೊಳಿಸಿ, ಯಾತ್ರೆಯನ್ನು ಮುಂದಿನ ಕೇಂದ್ರ ಗೋವಾಕ್ಕೆ ಕಳುಹಿಸಿಕೊಡುವ.

ಬನ್ನಿ, ವಿಶ್ವ ಮಾತೆ ಗೋಮಾತೆಯ ಪದತಲಗಳಲ್ಲಿ ನತಮಸ್ತಕರಾಗೋಣ.

ಇಂತಹ ಯಾತ್ರೆ, ಜನಜಾಗೃತಿ ಆಂದೋಲನಗಳು ಮಳೆಯಿದ್ದಂತೆ. ವರ್ಷಕ್ಕೊಮ್ಮೆ ಬರುವ ಮಳೆ ಚಿಗುರಿದ ಹಸಿರನ್ನು ಸಮೃದ್ಧವಾಗಿಸುತ್ತದೆ. ಅದು ವರ್ಷಂಪ್ರತಿ ನಡೆಯುವ ಪ್ರಕ್ರಿಯೆ. ಅಂತೆಯೇ ನಮ್ಮ ಬುದ್ಧಿಯಲ್ಲರಳಿದ ಚಿಗುರು ಬಾಡದೇ, ಬೆಳೆಬೆಳೆದು ಸಮೃದ್ಧವಾಗಿ, ಒಂದು ರಚನಾತ್ಮಕ ಕಾರ್ಯಪ್ರವೃತ್ತಿಗೆ ಹಚ್ಚಲು ಇಂತಹವುಗಳು ಬೇಕೇ ಬೇಕು. ವರ್ಷಕ್ಕೊಮ್ಮೆಯೋ, ಎರಡು ಬಾರಿಯೋ ಅದು ಲೆಕ್ಕವಲ್ಲ. ಸುಂದರ ಜೀವನಕ್ಕೆ ಹಚ್ಚುವ ಸಂದೇಶ ಮರೆಯದಂತೆ ಎಚ್ಚರಿಸುವುದೇ ಇವುಗಳ ಸಂಘಟನೆಯ ಹಿಂದಿರುವ ಉದ್ದೇಶ. ಸಂದೇಶ ಮನಃಪಟಲಗಳಲ್ಲಿ ಗಟ್ಟಿಗೊಳ್ಳುತ್ತಿರುವಂತೆಯೇ, ರಚನಾತ್ಮಕ ಕಾರ್ಯಗಳಲ್ಲಿ ಸಕ್ರಿಯಗೊಳ್ಳುವ ಜವಾಬ್ದಾರಿ ಇದೆ. ಹೇಗೆ ಧಾರಾಕಾರ ಮಳೆಯ ನಂತರ ನಿರುಮ್ಮಳವಾಗಿ, ಏಕ ರೀತಿಯಲ್ಲಿ ನದಿ ಪ್ರವಹಿಸುತ್ತದೆಯೋ, ಹಾಗೆ. ಅಂತಹ ನದಿ ಮುಂದಿನ ಮಳೆಗಾಲದ ವರೆಗೆ ಹಾಗೂ ನಂತರ ನಮ್ಮನ್ನು ಹೇಗೆ ಸಾಕಿ ಸಲಹುತ್ತದೆಯೋ, ಹಾಗೆ ಈ ಗೋ ಆಧಾರಿತ ರಚನಾತ್ಮಕ ಯೋಜನೆಗಳು ನಮ್ಮನ್ನು ಅನಂತ ಕಾಲದವರೆಗೆ ಒಂದು ಸುಂದರ ಬದುಕಿಗೆ ಹಚ್ಚುತ್ತವೆ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

# ಪ್ರಶ್ನೋತ್ತರ

ಪ್ರ: ಭಾರತೀಯ ಗೋ ತಳಿಗಳ ಅವನತಿಗೆ ಪ್ರಮುಖ ಕಾರಣಗಳೇನು?

ಉ: ಭಾರತೀಯ ಗೋ ತಳಿಗಳ ಅವನತಿ 1950 ರಿಂದಲೇ ಪ್ರಾರಂಭವಾಯಿತು. ಹಸಿರು ಕ್ರಾಂತಿಯಿಂದ ವೇಗ ಪಡೆಯಿತು. ಗೋ ಆಧಾರಿತ ಸಾವಯವ ಹಾಗೂ ಸುಸ್ಥಿರ ಕೃಷಿ ವ್ಯವಸ್ಥೆಯ ಬದಲು ಕೇಂದ್ರ ಸರಕಾರ, ಪಾಶ್ಚಿಮಾತ್ಯರ ಪ್ರಭಾವಕ್ಕೆ ಸಿಕ್ಕು ರಾಸಾಯನಿಕ ಹಾಗೂ ಟ್ರ್ಯಾಕ್ಟರ್ ಆಧಾರಿತ ಅವೈಜ್ಞಾನಿಕ ಹಾಗೂ ಅಸ್ಥಿರ ಕೃಷಿಗೆ ಉತ್ತೇಜನ ನೀಡಲು ತೊಡಗಿದ್ದು ಮೊದಲನೇ ಕಾರಣ. 1960 ರ ದಶಕದಲ್ಲಿ ಪ್ರಾರಂಭವಾದ "ಶ್ವೇತ ಕ್ರಾಂತಿ" ಎರಡನೆಯ ಮುಖ್ಯ ಕಾರಣ. ಭಾರತೀಯ ಹಸುಗಳ ತಳಿ ಶುದ್ಧತೆ ಕಾಪಾಡಿಕೊಂಡೇ, ಅವುಗಳ ಹಾಲು ನೀಡುವ ಸಾಮರ್ಥ್ಯ ಹೆಚ್ಚಿಸುವಂಥ ಸಂಶೋಧನೆಗಳ ಬದಲು ಸುಲಭವಾದ ರೆಡಿಮೇಡ್ ಪರಿಹಾರಕ್ಕೆ ಸರಕಾರ ಕೈ ಹಾಕಿತು.

ಪ್ರ: ಶ್ವೇತ ಕ್ರಾಂತಿಯು ಭಾರತೀಯ ಗೋ ತಳಿಗಳ ಅವನತಿಗೆ ಹೇಗೆ ಕಾರಣವಾಯಿತು?

ಭಾರತದಲ್ಲಿ ಹಾಲಿನ ಉತ್ಪಾದನೆ ಹೆಚ್ಚಿಸಲು ಜರ್ಸಿ, ಎಚ್. ಎಫ್. ಮುಂತಾದ ವಿದೇಶೀ ತಳಿ ಹೋರಿಗಳ ವೀರ್ಯದಿಂದ ಭಾರತೀಯ ತಳಿಯ ಹಸುಗಳಿಗೆ ಕೃತಕ ಗರ್ಭದಾನ ಕಾರ್ಯಕ್ರಮವನ್ನು ದೇಶವ್ಯಾಪಿಯಾಗಿ ಕೈಗೊಳ್ಳಲಾಯಿತು. ಇದರ ಫಲವಾಗಿ ಹಸುಗಳನ್ನು ಹಾಲು ಕೊಡುವ ಯಂತ್ರವಾಗಿ ನೋಡುವ ಪರಿಪಾಠ ಬೆಳೆಯಿತು. ಹೀಗೆ "ಹಸಿರು ಕ್ರಾಂತಿ" ಹಾಗೂ "ಶ್ವೇತ ಕ್ರಾಂತಿ" ಗಳು ಭಾರತೀಯ ಗೋ ತಳಿಗಳ ಪಾಲಿಗೆ ಮರಣದಂಡನೆಯಾದವು. ಈ ಎರಡು ಸರಕಾರೀ ಕ್ರಾಂತಿಗಳ ತಾರ್ಕಿಕ ಹಂತವೇ ಕೊನೆಯ ಕ್ರಾಂತಿ. ಅದೇ ಗೋ ಮಾಂಸ ಕ್ರಾಂತಿ.

ಪ್ರ: ಗೋಮಾಂಸ ಕ್ರಾಂತಿ ಅಂದರೇನು?

ಉ: ಗೋ ಸಂರಕ್ಷಣೆ ಬಗ್ಗೆ ಗಾಂಧೀಜಿ, ಬಾಬು ರಾಜೇಂದ್ರ ಪ್ರಸಾದ್, ವಿನೋಭಾ ಭಾವೆ ಮುಂತಾದ ನೇತಾರರು ನೀಡಿದ ಎಲ್ಲ ವಚನಗಳನ್ನು ಧಿಕ್ಕರಿಸಿ ಬಿಗಿಯಾದ ಗೋವಧೆ ಕಾನೂನನ್ನು ತರಲು ಕೇಂದ್ರ ಸರಕಾರ ವಿಫಲವಾಯಿತು. ಅದಕ್ಕೆ ಬದಲಾಗಿ ದೇಶಾದ್ಯಂತ ಗೋವಧೆಗಾಗಿ ಕಸಾಯಿ ಖಾನೆಗಳ ಸ್ಥಾಪನೆಗೆ ಉತ್ತೇಜನ ದೊರೆಯಿತು. ಸ್ವಾತಂತ್ರ್ಯ ಬಂದಾಗ ಇದ್ದ ಕಸಾಯಿ ಖಾನೆಗಳ ಸಂಖ್ಯೆ ಕೇವಲ 360. ಇಂದು ಅದು 36 ಸಾವಿರ ದಾಟಿದೆ. ದೇಶದಲ್ಲಿ ಗೋಹತ್ಯೆ ವ್ಯವಸ್ಥಿತವಾಗಿ , ನಿರಂತರವಾಗಿ ನಡೆಯುತ್ತಿದೆ. ಇದನ್ನು "ಗೋಮಾಂಸ ಕ್ರಾಂತಿ" ಎನ್ನದೆ ಬೇರೆ ಹೇಗೆ ಕರೆಯಬೇಕು. ಹೀಗೆ ಭಾರತೀಯ ಗೋ ತಳಿಗಳ ಅವನತಿಗೆ ಮೂರು ಸರಕಾರೀ ಕಾರ್ಯಕ್ರಮಗಳು ಕಾರಣ. ಅವು 1. ಹಸಿರು ಕ್ರಾಂತಿ, 2. ಶ್ವೇತ ಕ್ರಾಂತಿ, 3. ಗೋಮಾಂಸ ಕ್ರಾಂತಿ.

– **ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

# ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 26ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

**ಮಾಸದ ಗೋವು**

# ಸಿರಿ

**ಪಶ್ಚಿಮ ಬಂಗಾಳ, ಸಿಕ್ಕಿಂ, ಭುತಾನ್ ಮತ್ತು ನೇಪಾಳಗಳಲ್ಲಿ ಕೆಲಸಗಾರ ಮತ್ತು ಉತ್ತಮ ಹಾಲಿನ ತಳಿ ಎಂದು ಖ್ಯಾತವಾದ ತಳಿ ಸಿರಿ ಈ ತಿಂಗಳ ಮಾಸದ ಗೋವು. ಒಣ ಪ್ರದೇಶದಲ್ಲಿ ದೊರಕುವ ಅತಿ ಕಡಿಮೆ ನೀರು ಮತ್ತು ಹುಲ್ಲು ಆಹಾರಕ್ಕೆ ಹೊಂದಿಕೊಂಡ ತಳಿ ಇದು. ಕೃತಕ ಗರ್ಭಧಾರಣೆಯ ಕೊಳವೆಗಳು ಬುಡಕಟ್ಟು ಜನಾಂಗವನ್ನು ತಲುಪದ ಕಾರಣ ಈ ತಳಿ ಇಂದಿಗೂ ಅಲ್ಪ ಪ್ರಮಾಣದಲ್ಲಿ ಲಭ್ಯ.**

ಜಗತ್ತಿನ ನಾಗರೀಕತೆಗೆ ಸಾರಿಗೆ–ಸಂಪರ್ಕ ಮಾಧ್ಯಮಗಳ ಕೊಡುಗೆ ಅನನ್ಯ; ದಿಟವೆ. ಆದರೆ ಅವುಗಳ ಅಲಭ್ಯತೆ ಕೂಡ ಕೆಲವೊಮ್ಮೆ ಧೀರ್ಘಕಾಲೀನ ಉಪಯುಕ್ತತೆಗಳನ್ನು ಕೊಡಬಹುದು. ಆಗಬಹುದಾದ ಅಪಾಯಗಳನ್ನು ತಪ್ಪಿಸಬಹುದು. ಒಂದು ಉದಾಹರಣೆ ಇಲ್ಲಿದೆ ನೋಡಿ.

ಇಸವಿಯ ಹೊತ್ತಿಗೆ ನಡೆದ ಗಣತಿಯಲ್ಲಿ ಲೆಕ್ಕಕ್ಕೆ ಸಿಕ್ಕಿದ್ದು ಹತ್ತು ಮತ್ತೊಂದು. ಅಮೃತೋಪಮವಾದ ಹಾಲನ್ನು ನೀಡುತ್ತಿದ್ದ ಭಾರತದ ತಳಿಯೊಂದನ್ನು ಸಂಪೂರ್ಣ ನಿರ್ನಾಮ ಮಾಡಲೆಂದು ಶೀತಲೀಕೃತ ಡಬ್ಬಿಗಳಲ್ಲಿ ಬಂದ ಜೆರ್ಸಿಯ ಸೆಮೆನ್ ತನ್ನ ಕಾರ್ಯ ಮಾಡಿಲ್ಲ ಎಂದು ಗೊತ್ತಾಗುವಷ್ಟರಲ್ಲಿ ಕಾಲ ಮಿಂಚಿತ್ತು.



**ಸಿರಿ –ಪಶ್ಚಿಮ ಬಂಗಾಳ, ಸಿಕ್ಕಿಂ, ನೇಪಾಳ ಮತ್ತು ಭುತಾನ್**

ಸಿರಿ ಪಶ್ಚಿಮ ಬಂಗಾಳದ ಡಾರ್ಜ್ಲಿಂಗ್ ಮತ್ತು ಸಿಕ್ಕಿಂ ರಾಜ್ಯಗಳ ಗುಡ್ಡಗಾಡು ಪ್ರದೇಶಗಳಲ್ಲಿ ಕಾಣಬರುವ ಒಂದು ಅಪೂರ್ವ ಮಧ್ಯಮಗಾತ್ರದ ಗೋತಳಿ. 70ರ ದಶಕದವರೆಗೂ ವಿಪುಲವಾಗಿ ದೊರೆಯುತ್ತಿದ್ದ ತಳಿ ಇದು. 80ರ ದಶಕದಲ್ಲಿ ಕ್ಷೀರಕ್ರಾಂತಿ ಎಂಬ ಮಾಯಂಗನೆ ಬಂದಳು ನೋಡಿ, 20 ವರ್ಷಗಳಲ್ಲಿ ತಳಿಗೆ ತಳಿಯೆ ನಾಮವಶೇಷಗೊಂಡು 2000ನೆ





ಸಿರಿ ತಳಿ ನಾಶವಾಗಿಹೋಗಿದೆ ಎಂದು ಷರಾ ಬರೆಯಬೇಕೆನ್ನುವಷ್ಟರಲ್ಲಿ ಬಂದ ಸುದ್ದಿ, ಸಂಪರ್ಕದ ಯಾವ ಸೌಲಭ್ಯಗಳೂ ಇಲ್ಲದ ಬುಡಕಟ್ಟು ಜನಾಂಗಗಳ ಹಟ್ಟಿಯಲ್ಲಿ ಶುದ್ಧ ತಳಿ ಲಭ್ಯ ಎಂಬುದು. ಕಾರಣ ಇಷ್ಟೆ, ಕೃತಕ ಗರ್ಭದಾರಣೆಯ ಕೊಳವೆಗಳು ಸರಿಯಾದ ರಸ್ತೆಗಳಿಲ್ಲದ ಕಾರಣ ಅಲ್ಲಿಯವರೆಗೂ ತಲುಪಿರಲಿಲ್ಲ!

ಸಿರಿ ಎಂಬ ಭಾರತದ ಗೋ–ಸಿರಿ ಪಶ್ಚಿಮ ಬಂಗಾಳ, ಸಿಕ್ಕಿಂ ರಾಜ್ಯಗಳಲ್ಲದೆ, ಭುತಾನ್ ಮತ್ತು ನೇಪಾಳಗಳಲ್ಲಿಯೂ ಕಂಡುಬರುತ್ತದೆ. ಈ ಪ್ರದೇಶಗಳಲ್ಲಿ ಪ್ರಚಲಿತವಾಗಿರುವುದು ಭಾವಣಿ



ಕೃಷಿ. ಗುಡ್ಡಗಳನ್ನು ಕಡಿದು ಇಳಿಜಾರುಗಳಲ್ಲಿ ಮಾಡಲಾದ ಗದ್ದೆಗಳಲ್ಲಿ ನಡೆಯುವ ಸಾಹಸಮಯ ಕೃಷಿಯನ್ನು ಸುಲಭವಾಗಿಸಿದ್ದು ಸಿರಿ. ಅಕ್ಕಿ, ಜೋಳ, ಶುಂಠಿ ಇತ್ಯಾದಿಗಳು ಇಲ್ಲಿನ ಪ್ರಮುಖ ಬೆಳೆಗಳು. ಈ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಬಹಳ; ಮಳೆ ವರ್ಷಕ್ಕೆ 3–55 ಸೆಂಟಿಮೀಟರ್, ಅದೂ ವರ್ಷಾವಧಿ ಹಂಚಿಹೋಗಿದೆ. ಹಾಗಾಗಿ ಒಳ್ಳೆಯ ಮೇವೂ ಅಲಭ್ಯ. ಒಣಹುಲ್ಲು, ಸಿಪ್ಪೆ ಮತ್ತು ಖಾನ್ಯು, ಗೋಗುನ್ ಇತ್ಯಾದಿ ಮರಗಳ ಎಲೆಗಳು –ಇವುಗಳೆ ಮೇವು. ಸ್ವಲ್ಪ ಸಿರಿವಂತರ ಮನೆಯಲ್ಲಿ (ಹಟ್ಟಿಯಲ್ಲಿ?!) ಗೊಟಮಾಲ ಎಂಬ ಹುಲ್ಲು ಸಿಗುತ್ತದೆ.



ಹಾಲು ಕೊಡುವ ಹಸುಗಳಿಗೆ ಸ್ವಲ್ಪ ಉತ್ತಮ ಆಹಾರ; ಅಕ್ಕಿ ನುಚ್ಚು, ಖ್ಯುಶ್ ಎಂಬ ಒಣ ಹಣ್ಣು, ಜೋಳದ ಹೊಟ್ಟು ಇವೆಲ್ಲವುಗಳನ್ನು ಕುದಿಸಿ ಮಾಡಿದ ಹಿಂಡಿ.

ಇಲ್ಲಿಯ ಹಾಗೆ ಅಲ್ಲೂ ಹಸುಗಳನ್ನು ಮಂದೆಗಳಲ್ಲಿ ಗೋಪಾಲಕರು ಮೇವಿಗಾಗಿ ಕಾಡಿಗೆ ಕೊಂಡೊಯ್ಯುವ ಪದ್ಧತಿ ಇದೆ.

ಸಿರಿ ತಳಿಯ ಗೋವುಗಳು ಸಾಮಾನ್ಯವಾಗಿ ಬಿಳಿ ಅಥವಾ ಬೂದು ಪಟ್ಟೆಗಳಿಂದ ಕೂಡಿದ ಕಪ್ಪು ಬಣ್ಣದವು. ಅಪರೂಪಕ್ಕೆ ಯಾವುದೆ ಪಟ್ಟೆಗಳಿಲ್ಲದ ಪೂರ್ಣ ಕಪ್ಪು ಅಥವಾ ಬೂದು ಹಸುಗಳನ್ನು ಕಾಣಬಹುದು. ಮಧ್ಯಮ ಗಾತ್ರ ಕೊಂಬು, ಅಡ್ಡಚಾಚಿರುವ ಕಿವಿಗಳು, ಉಬ್ಬಿದ ಹಣೆ ಇವುಗಳ ದೈಹಿಕ ಲಕ್ಷಣಗಳು. ಎತ್ತರ ಅಜಮಾಸು 120ಸೆ.ಮಿ.

ಸಿರಿಗಳ ಒಂದು ವಿಶೇಷವೆಂದರೆ ಇದು cervico-thoracic ವಿಧದ ಗೂನು ಹೊಂದಿದ ಭಾರತದ ಏಕಮಾತ್ರ ತಳಿ. ಈ ವಿಧದ ಗೂನು ಹೊಂದಿದ ತಳಿಗಳು ಚೀನಾದ ಸಿಕೊಂಗ್ ಪ್ರಾಂತ್ಯದಲ್ಲಿ ಮತ್ತು ಅಗ್ನೇಯ ಭೂತಾನ್‌ಗಳಲ್ಲಿ ಇವೆಯಾದರೂ ಭಾರತದಲ್ಲಿ ಇರುವುದು ಸಿರಿ ಮಾತ್ರ.

ಸಿರಿ ತಳಿಯನ್ನೆ ಹೊಂದುವ ನೇಪಾಳಿ ತಳಿಯ ಜೊತೆ ಸಂಕರ ಮಾಡಿದ 'ಕಚ್ಚ ಸಿರಿ' ಎಂದು ಕರೆಯಲ್ಪಡುವ ತಳಿ ತುಂಬಾ ಜನಪ್ರಿಯ. ಆದರೆ ಅವುಗಳ ನಿಲುವು, ಮತ್ತು ಗೂನುಗಳಿಂದ ಅವುಗಳನ್ನು ಪ್ರತ್ಯೇಕಿಸಬಹುದು.

ಬುಡ್ಡಕಟ್ಟು ಜನಾಂಗಗಳ ಬಳಿಗೆ ಕೃತಕ ಗರ್ಭಧಾರಣೆಯ ವಿಧಾನಗಳು ತಲುಪುವ ಮುನ್ನವೇ ಸಿರಿಯ ರಕ್ಷಣೆ ಕೈಗೊಳ್ಳಬೇಕಾಗಿದೆ. ಇದು ನಮ್ಮದೆ ಕೈಗಳು ನಮ್ಮದೇ ಕಾಲುಗಳೊಂದಿಗೆ ಬಡಿದಾಡಿದ ಹಾಗಲ್ಲವೆ?

**– ಮಧುಕೇಶ ದೊಡ್ಡೇರಿ**



**ಮೂಲ: ಪಶ್ಚಿಮ ಬಂಗಾಳ, ಸಿಕ್ಕಿಂ, ಭುತಾನ್ ಮತ್ತು ನೇಪಾಳ**
**ವಿಭಾಗ: ಉಭಯ**
**ಧೃಡ ಶರೀರ**
**ಎತ್ತರ: ಸುಮಾರು ೧೨೦ ಸೆ.ಮಿ.**
**ಬಣ್ಣ: ಸಾಂದ್ರ ಬೂದು, ಕಪ್ಪು, ಬಿಳಿ, ಪಟ್ಟೆ**
**ಮುಖ: ಅಡ್ಡಚಾಚಿದ ಕಿವಿ, ಉಬ್ಬಿದ ಹಣೆ**
**ಕೊಂಬು: ಉಬ್ಬಿದ ಕೊಂಬು**
**ಕಾಲು: ಮಧ್ಯಮ ಗಾತ್ರ**

ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ

# ಪೂರ್ವಾರ್ಧದ ಯಾತ್ರೆಯ ಸುತ್ತ ಒಂದು ಸುತ್ತು

ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ – ಗ್ರಾಮ, ಗೋವು, ಪ್ರಕೃತಿಯ ಸ್ವಾಸ್ಥ್ಯ ಸ್ಥಾಪನೆಗೆ ಹೊರಟಿದೆ. ಅಂದರೆ ಸಹಜ–ಸುಂದರ ಜೀವನವನ್ನು ನಮ್ಮದಾಗಿಸಿಕೊಳ್ಳಲು ಒಂದು ಪ್ರಯತ್ನ, ಪ್ರಕೃತಿ ಮಾತೆಗೊಂದು ಪ್ರಾರ್ಥನೆ, ಸಮಸ್ತರಲ್ಲೊಂದು ಬಿನ್ನಹ.

ಈಗಾಗಲೇ ಗೊತ್ತಿರುವಂತೆ ಯಾತ್ರೆ ಕುರುಕ್ಷೇತ್ರದಿಂದ ಹೊರಟು, ಹರ್ಯಾಣ, ಪಂಜಾಬ್, ಜಮ್ಮು, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಉತ್ತರಾಂಚಲ, ಬಿಹಾರ, ಪಶ್ಚಿಮ ಬಂಗಾಳ, ಝಾರ್ಖಂಡ್, ಒರಿಸ್ಸಾ, ಆಂಧ್ರ ಪ್ರದೇಶ ಮಾರ್ಗವಾಗಿ ಮುಂದೆ–ಮುಂದೆ ಸಾಗುತ್ತಿದೆ. ಐವತ್ತು ದಿನಗಳನ್ನು ಪೂರೈಸಿದ ಯಾತ್ರೆ ಈಗ ತಮಿಳುನಾಡಿನಲ್ಲಿದೆ. ಈಗಿಲ್ಲಿ ಮಳೆಗಾಲ. ಸೆಖೆಯ ಕಿರಿಕಿರಿ, ಮಳೆಯ ಗಿಜಿಗಿಜಿ. ಅದಾವುದೂ ಯಾತ್ರೆಯ ಹುಮ್ಮಸ್ಸಿಗೆ ಕುಂದಿತ್ತಿಲ್ಲ.

ಹೆಚ್ಚು–ಕಡಿಮೆ ಭಾರತದ ಅರ್ಧ ಭಾಗವನ್ನು ಕ್ರಮಿಸಿದ ಯಾತ್ರೆಗೆ ಒಂದೊಂದು ರಾಜ್ಯದ ಅನುಭವವೂ ವಿಶಿಷ್ಟ. ಭಕ್ತಿ, ಶ್ರದ್ಧೆ, ನಿಷ್ಠೆ, ವೈಚಾರಿಕತೆ ಹೀಗೆ ಯಾವುದನ್ನು ತೆಗೆದುಕೊಂಡರೂ ಪ್ರತಿಯೊಂದು ರಾಜ್ಯದ ಭಿನ್ನತೆಯೂ ಯಾತ್ರೆಯ ಏಕತೆಯಲ್ಲಿ ವಿಲೀನಗೊಳ್ಳುತ್ತಲಿದೆ.






ಪಂಜಾಬಿನಲ್ಲಿ ಸಿಖ್ಖರ ಜೋಶ್, ಜಮ್ಮುವಿನಲ್ಲಿ ಬಿಗಿ ಭದ್ರತೆಯ ಮಧ್ಯದ ನಿಷ್ಠೆ, ಹಿಮಾಚಲದ ಆಪ್ತ ವಾತಾವರಣ, ಉತ್ತರ ಪ್ರದೇಶದ ಜನಾಂದೋಲನದ ಮಾದರಿ, ಅಯೋಧ್ಯೆಯಲ್ಲಿ ರಾಮ ಮಂದಿರ ಆಂದೋಲನವನ್ನು ಇದರ ಜೊತೆಗೆ ಜೋಡಿಸುವ ಪ್ರಯತ್ನ, ಹರಿದ್ವಾರ–ಪ್ರಯಾಗ–ಕಾಶಿಯಲ್ಲಿ ಗಂಗೆಯ ಕುರಿತಿರುವ ಭಾವುಕತೆ ಗೋವಿನೊಂದಿಗೆ ಹಬ್ಬಿಕೊಳ್ಳುವುದು, ಬಿಹಾರದಲ್ಲಿ ಕುಕ್ಕಿ ತಿನ್ನುವ ಬಡತನದ ಮಧ್ಯದಲ್ಲಿಯೂ ಏನೋ ಒಂದನ್ನು ಸಾಧಿಸುವ ಛಲ, ಪಶ್ಚಿಮ ಬಂಗಾಳದ ಭಾವ ಪರಾಕಾಷ್ಠೆ, ಒರಿಸ್ಸಾದ ಭಕ್ತಿಯ ಚರಮ ಸೀಮೆ, ಆಂಧ್ರದ ಢಾಂ–ಢೂಂ ಪಟಾಕಿಯ ಭರಾಟೆ, ತಮಿಳುನಾಡಿನ ನಾದಸ್ವರದ ನಾದಮಯ ಪ್ರಪಂಚ – ಹೀಗೆ ದಿನಕ್ಕೊಂದು ಮಾದರಿ. ಸುಲಭದಲ್ಲಿ ವಿಂಗಡಿಸಲಾಗದ, ಕ್ರಮೇಣ ಬದಲಾಗುತ್ತಾ ಹೋಗುವ ನಾವಿನ್ಯ.

ಕೆಲವೊಂದು ವಿಷಯಗಳನ್ನು ಹೇಗೆ ಹೇಳುವುದೋ ಅರ್ಥವಾಗುವುದಿಲ್ಲ. ಪಶ್ಚಿಮ ಬಂಗಾಳದ ಕಾರ್ಯಕ್ರಮಗಳಲ್ಲಿ ಮನೆ–ಮಂದಿಯ ಕಾರ್ಯಕ್ರಮದ ರೀತಿಯ ವಾತಾವರಣ ಇರುತ್ತಿತ್ತು. ಹಸಿರು ಮೈದಾನದ ಮಧ್ಯದಲ್ಲಿ ಪುಟ್ಟದೊಂದು ವೇದಿಕೆ ಹಾಕಿರುತ್ತಿದ್ದರು. ಆ ಮೈದಾನಕ್ಕೆ ನಮ್ಮ ಯಾತ್ರೆಯ ಗೋ ರಥ ಹೋದೊಡನೆ ಎಲ್ಲರೂ ಮನೆಯೊಳಗಿಂದ ಹೊರಗೆ ಬಂದು ನಿಂತಂತೆ ಹಾಜರಾಗಿ ಅವರವರ ಭಕ್ತಿ–ಭಾವದ ಸಮರ್ಪಣೆ ಮಾಡುತ್ತಿದ್ದರು. ನಂತರದೊಂದು ಪುಟ್ಟ ಅವಧಿಯಲ್ಲಿ ಆಶೀರ್ವಚನ, ಭಾಷಣ, ಸುಶ್ರಾವ್ಯ ಗಾಯನ, ಸುಂದರ ನೃತ್ಯ – ಎಲ್ಲವೂ ಚಿಕ್ಕದಾಗಿ, ಚೊಕ್ಕವಾಗಿ ರೂಪುಗೊಳ್ಳುತ್ತಿದ್ದವು. ಮತ್ತೆ, ಪಶ್ಚಿಮ ಬಂಗಾಳದಲ್ಲಿ ಬಿಲ್ಲು–ಬಾಣ ಧರಿಸಿದ ವನವಾಸಿಗಳು 20–25 ಕಿಲೋಮೀಟರ್ ದೂರದಿಂದ ಕೆಲವರು ಸೈಕಲ್ ತುಳಿದುಕೊಂಡು, ಮತ್ತುಳಿದವರು ನಡೆದುಕೊಂಡು ಕಾರ್ಯಕ್ರಮಕ್ಕೋಸ್ಕರ ಸಾವಿರ



ಸಾವಿರ ಸಂಖ್ಯೆಯಲ್ಲಿ ಬರುತ್ತಿದ್ದುದರ ಹಿಂದಿದ್ದ ನಿಷ್ಠೆ ಅರ್ಥವಾಗುವುದಿಲ್ಲ. ಒರಿಸ್ಸಾದ ಒಂದು ಕೇಂದ್ರದಲ್ಲಿ ಮಾವೋಗಳು ಹುಟ್ಟಿಸಿದ ಭೀತಿ ಮೈ ನಡುಗಿಸಿತ್ತು.

ಮಾರ್ಗದಲ್ಲಿ ಬಿಹಾರದ ಬಡತನವೂ ಎದುರಾಯಿತು. ಬಾಕಿ ಭಾರತ ಅಷ್ಟು ಸುಭಿಕ್ಷವಾಗಿರುವಾಗ ಈ ಬಿಹಾರ ಮಾತ್ರ ಏಕೆ ಹೀಗೆ ಎಂದು ಮನ ಮರುಗಿತು. ಹಾಗಾಗಿ, ನಮಗೆ ಊಟದ ಮೇಲೆ ಸಿಗುತ್ತಿದ್ದ ಹೆಚ್ಚು-ಕಡಿಮೆ ಅಷ್ಟೂ ತಿಂಡಿ ತೀರ್ಥಗಳನ್ನು ಅವರಿಗೆ ಹಂಚಿಬಿಡುತ್ತಿದ್ದೆವು. ಆಗವರ ಮುಖ ನೋಡಿ, ನಾವುಂಡ ತೃಪ್ತಿರಸ ಆಹ್ಲಾದಕರವಾಗಿತ್ತು.



ಮತ್ತೊಂದನ್ನು ಹೇಳಲೇಬೇಕು. ಮೂಲತಃ ರಾಯಚೂರಿನ, ಆಂಧ್ರದ ನಿವಾಸಿಯಾದ ಶ್ರೀನಿವಾಸ ರೆಡ್ಡಿ ಎಂಬುವವರು ಯಾತ್ರೆಯಲ್ಲಿ ಹಂಚಲೆಂದು ಸಾವಿರಗಟ್ಟಲೆ ಕಾಮಧೇನುವಿನ ಫೋಟೋಗಳನ್ನು ಮಾಡಿಸಿದ್ದರು. ಅವನ್ನು ಕೊಟ್ಟಿದ್ದು ವಿಶಾಖಪಟ್ಟಣದಲ್ಲಿ. ಅಲ್ಲಿಂದ ಮುಂದೆ ಹಂಚುವಿಕೆ ಪ್ರಾರಂಭ. ಫೋಟೋ ಸ್ವೀಕರಿಸುವಾಗ ಒಬ್ಬೊಬ್ಬರ ಮುಖ, ಹಾವ-ಭಾವ ನೋಡಬೇಕಿತ್ತು. ಎಲ್ಲವೂ ಭಿನ್ನಭಿನ್ನ. ಮಕ್ಕಳಿಗೆ ತಿಂಡಿ ಸಿಕ್ಕಿದ ಖುಷಿ, ದೊಡ್ಡವರಿಗೆ ಉಚಿತವಾಗಿ ಸ್ವೀಕರಿಸಿದ ಖುಷಿ. ಮತ್ತೆ ಕೆಲವರಿದ್ದರು. ಗಾಡಿಯಲ್ಲಿ ಹೋಗುತ್ತಿದ್ದವರು ಫೋಟೋ ಕೊಡುವುದನ್ನು ಕಂಡು, ಗಾಡಿಯನ್ನು ರಸ್ತೆಯ ಮಧ್ಯದಲ್ಲಿಯೇ ನಿಲ್ಲಿಸಿ, ಚಪ್ಪಲಿ ಬಿಚ್ಚಿ, ಫೋಟೋ ಸ್ವೀಕರಿಸಿ, ಮೂರ್ನಾಲ್ಕು ನಮನಗಳನ್ನು ಸಮರ್ಪಿಸಿ, ನಮ್ಮೆಡೆಗೊಂದು ಮುಗುಳ್ನಗೆ ಬೀರಿ, ಮುನ್ನಡೆಯುತ್ತಿದ್ದ ದೃಶ್ಯ ಕಣ್ಣಂಚಿನಲ್ಲಿ ನೀರನ್ನು ಜಿನುಗಿಸುತ್ತಿತ್ತು.

ಯಾತ್ರೆ ಹೊರಡುವಾಗ ಅಂದುಕೊಂಡಿದ್ದೆವು. ಊಟ, ತಿಂಡಿ, ವಿಶ್ರಾಂತಿ, ಸ್ನಾನ – ಇವೆಲ್ಲದರ ವ್ಯವಸ್ಥೆ ಆ ಭಗವಂತನಿಗೇ ಪ್ರಿಯವಾಗಬಹುದು ಎಂದು. ಆದರೆ ಇಲ್ಲಿಯವರೆಗಿನ ವ್ಯವಸ್ಥೆ ತುಂಬ ಚೆನ್ನಾಗಿ ಮಾಡಿದ್ದಾರೆ. ಯಾತ್ರಾ ಸಮಿತಿಯ ವ್ಯವಸ್ಥಾ ಜಾಲವನ್ನು ಕಂಡು ಬೆರಗಾಗಿದ್ದೇವೆ.

ಯಾತ್ರೆಯ ಪ್ರಾರಂಭದಲ್ಲಿ ಹೆಚ್ಚು-ಕಡಿಮೆ ಎಲ್ಲರೂ ಸಣ್ಣ-ಪುಟ್ಟ ಸಮಸ್ಯೆಗಳಿಗೂ ಹೊಂದಿಕೊಳ್ಳುವುದು ಕಷ್ಟವಾಗಿ, ವಾಪಸ್ ಹೊರಡುವ ಧಮಕಿಗಳು ಬರುತ್ತಿದ್ದವು. ಆದರೆ ಅದೀಗ ಇಲ್ಲ ಎಂಬಷ್ಟರಮಟ್ಟಿಗೆ ಸುಧಾರಿಸಿದೆ. ದಿನ ಕಳೆದದ್ದು ಗೊತ್ತಾಗುತ್ತಲೇ ಇಲ್ಲ. ಒಂದು ಕಡೆ ಬೆಳಗಾಗುತ್ತಿದೆ, ಮತ್ತೊಂದು ಕಡೆ ರಾತ್ರಿಯಾಗುತ್ತಿದೆ. ಅಷ್ಟೇ ವ್ಯತ್ಯಾಸ ಗೊತ್ತಾಗುತ್ತಿರುವುದು.

ಇನ್ನು ದಿನಬೆಳಗಾದರೆ ಊರು ಬದಲಾಗುತ್ತಿರುವುದೂ ಅಷ್ಟೊಂದು ಗಮನಕ್ಕೆ ಬರುತ್ತಿಲ್ಲ. ಮೊಬೈಲ್ ಟವರ್ ಬದಲಾದಂತೆ ಊರೂರು ಬದಲಾಗುತ್ತಿವೆ.

ಇನ್ನು, ಯಾತ್ರೆಯಲ್ಲಿ ದೇಶ ಮಂಗಲಕ್ಕಾಗಿ ದುಡಿಯುತ್ತಿರುವ ಬಗೆಗೆ ಒಂದಿಷ್ಟು. ದಿನವೊಂದಕ್ಕೆ ಸರಾಸರಿ 200 ಕಿಲೋಮೀಟರ್ ಪ್ರಯಾಣ, ನಾಲ್ಕು ಜನಜಾಗೃತಿ ಸಮಾವೇಶಗಳು. ಇದುತನಕ ಮಾಡಿದ ಸಾಧನೆಯನ್ನು ಇಲ್ಲಿ ಅಂಕಿ-ಅಂಶಗಳ ಸಮೇತ ಬಣ್ಣಿಸಲಾಗುತ್ತಿದೆ. ಅಷ್ಟರ ಆಧಾರದ ಮೇಲೆ ಭಾಷಣ, ಪ್ರವಚನಗಳು ನಡೆಯುತ್ತಿವೆ. ಸಾಧಕರು ವೇದಿಕೆಯನ್ನು ಅಲಂಕರಿಸುತ್ತಾರೆ. ಹಾಗಾಗಿ, ಒಟ್ಟಾರೆಯಾಗಿ ಇಷ್ಟರವರೆಗಿನ ಯಾತ್ರೆ ಗೋವನ್ನು ಆಧರಿಸಿ ಹೀಗೆ ಗ್ರಾಮವನ್ನು ಪುನರ್ನಿರ್ಮಿಸಬಹುದು, ಕೃಷಿಯನ್ನು ಹೀಗೆ ಸುಧಾರಿಸಬಹುದು, ತಿನ್ನುವ ಅನ್ನವನ್ನು ಈ ರೀತಿಯಲ್ಲಿ ಸ್ವಾದಮಯವಾಗಿಸಬಹುದು, ಸಮಗ್ರವಾಗಿ ದೇಶವನ್ನು ಈ ಮಾದರಿಯಲ್ಲಿ ಕಟ್ಟಬಹುದು – ಅದಕ್ಕಾಗಿ ಈ ಮಾದರಿಯಲ್ಲಿ ಪ್ರಯತ್ನಿಸುತ್ತಿದ್ದೇವೆ, ಹೀಗೆ ಹೋದರೆ ಯಶಸ್ಸು ಖಂಡಿತ ಎಂಬ ರೀತಿಯಲ್ಲಿ ದಾರಿ ತೋರಿಸುವವರು, ಧೈರ್ಯ ತುಂಬುವವರು ಕಾಣಿಸುತ್ತಿದ್ದಾರೆ. ವೇದಿಕೆಯನ್ನು ಅಲಂಕರಿಸುತ್ತಿರುವವರಲ್ಲಿ ಹೆಚ್ಚಿನವರು ಚೆನ್ನಾಗಿ ಮಾತುಬಲ್ಲವರೇ.

ಯಾತ್ರೆಯ ಕೊನೆಯಲ್ಲಿ ಮಹಾಮಹಿಮ ರಾಷ್ಟ್ರಪತಿಗಳಿಗೆ ಒಂದು ಪ್ರಸ್ತಾವನೆಯನ್ನು ಸಲ್ಲಿಸುವ ಯೋಜನೆ ಕಾರ್ಯಗತವಾಗುತ್ತಿದೆ. ಅದರಲ್ಲಿ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವ, ಗೋಹತ್ಯೆಯನ್ನು ನಿಷೇಧಿಸಲು ಪ್ರಬಲ ಕಾನೂನು ತರುವ, ಗೋವಿಗಾಗಿ ಪ್ರತ್ಯೇಕ ಸಚಿವ ಖಾತೆ ರೂಪಿಸುವ ಆಗ್ರಹ ಪ್ರಮುಖವಾಗಿ ಇರಲಿದೆ. ಅದಕ್ಕೆ ಹಸ್ತಾಕ್ಷರ ಅಭಿಯಾನದಲ್ಲಿ ಸಂಗ್ರಹವಾಗುತ್ತಿರುವ ಕೋಟಿಗಟ್ಟಲೆ ಸಹಿಗಳ ಸಾಥ್ ಇರಲಿದೆ.

ಯಾತ್ರೆಯ ಕೆಲಸ ಅಷ್ಟಕ್ಕೇ ಮುಗಿಯಿತು ಎಂದು ಕೈಕಟ್ಟಿ ಕೂತರೆ ಸಾಲದು. ಆದಷ್ಟು ರಚನಾತ್ಮಕ ಕಾರ್ಯಗಳಿಗೆ ಅಡಿಯಿಟ್ಟು,



ಗೋವಿನ ಲಾಭದಾಯಕತೆಯನ್ನು ಮಾರುಕಟ್ಟೆಯಲ್ಲಿ ಪ್ರತಿಷ್ಠಾಪಿಸಿದಲ್ಲಿ ಯಾತ್ರೆಯ ಉದ್ದೇಶ ಇನ್ನಷ್ಟು ಸಾರ್ಥಕವಾಗುತ್ತದೆ. ಈಗಾಗಲೆ ಇದರ ಪ್ರಾರಂಭದ ಮುನ್ಸೂಚನೆ ದೊರೆಯುತ್ತಿದೆ. ಇದು ಉತ್ತಮ ಬೆಳವಣಿಗೆ.

**– ಭಾರತೀಶ**